# ಕರ್ನಾಟಕ ಸರ್ಕಾರ

# ಸರ್ಕಾರಿ ವೈಮಾನಿಕ ತರಬೇತಿ ಶಾಲೆ, ಜಕ್ಕೂರು, ಬೆಂಗಳೂರು

ಜಕ್ಕೂರು ವಿಮಾನ ನಿಲ್ದಾಣ, ಯಲಹಂಕ ಅಂಚೆ. ಬೆಂಗಳೂರು– 560064,
ದೂರವಾಣಿ:080–23332251

# ಸರ್ಕಾರಿ ವೈಮಾನಿಕ ತರಬೇತಿ ಶಾಲೆ, ಜಕ್ಕೂರು, ಬೆಂಗಳೂರು

## ಆಡಳಿತ ವ್ಯವಸ್ಥೆ
## ತರಬೇತಿ ವಿವರಗಳು.

# ವೈಮಾನಿಕ ತರಬೇತಿಯ ಕಿರುವಿವರಗಳು

## ಸರ್ಕಾರಿ ವೈಮಾನಿಕ ತರಬೇತಿ ಶಾಲೆ, ಜಕ್ಕೂರು, ಬೆಂಗಳೂರು

## ಪೀಠಿಕೆ

1. ವೈಮಾನಿಕ ತರಭೇತಿ ಶಾಲೆ, ಬೆಂಗಳೂರು ಇದು ಆಗಿನ ಮೈಸೂರು ಮಹಾರಾಜರು ದಾನವಾಗಿ ನೀಡಿದ್ದ 214 ಎಕರೆ ಜಮೀನಿನಲ್ಲಿ ಸ್ಥಾಪಿಸಲಾಗಿರುತದೆ. ಇದು ಒಂದು ವೈಶಿಷ್ಟ್ಯಪೂರ್ಣ ವೈಮಾನಿಕ ತರಭೇತಿ ಸಂಸ್ಥೆಯಾಗಿದ್ದು ಇದನ್ನು 1949 ರಲ್ಲಿ ಅಂದಿನ ಭಾರತದ ಪ್ರಧಾನ ಮಂತ್ರಿಗಳಾದ ಪಂಡಿತ್ ಜವಾಹರ ಲಾಲ್‌ರವರು ಉದ್ಘಾಟಿಸಿರುತ್ತಾರೆ. ಸದರಿ ಸಂಸ್ಥೆಯನ್ನು 60 ವರ್ಷಗಳ ಹಿಂದೆ ಸ್ಥಾಪಿಸಲಾಗಿದ್ದು ವೈಮಾನಿಕ ತರಭೇತಿಯನ್ನು ಪಡೆಯಲು ಇಚ್ಛಿಸುವ ಯುವಜನರಿಗಾಗಿ ಕಮರ್ಷಿಯಲ್ ಪೈಲಟ್ ಲೈಸನ್ಸ್, ಹಾಗೂ ಖಾಸಗಿ ಪೈಲಟ್ ಲೈಸನ್ಸ್ ನೀಡುವ ಉದ್ದೇಶವನ್ನು ಹೊಂದಿರುತ್ತದೆ. ಸದರಿ ಸಂಸ್ಥೆಯಿಂದ ಯಶಸ್ವಿಯಾಗಿ ತರಭೇತಿ ಪಡೆದಿರುವ ನೂರಾರು ಯುವಕರು ದೇಶ ವಿದೇಶಗಳಲ್ಲಿನ ವೈಮಾನಿಕ ಸಂಸ್ಥೆಗಳಲ್ಲಿ ಉದ್ಯೋಗಗಳನ್ನು ಪಡೆಯಲು ಯಶಸ್ವಿಯಾಗಿರುತ್ತಾರೆ. ಸರ್ಕಾರಿ ವೈಮಾನಿಕ ತರಭೇತಿ ಶಾಲೆಯು ಒಟ್ಟು 7 ವಿಮಾನಗಳನ್ನು ಹೊಂದಿದ್ದು 4 ವಿಮಾನಗಳನ್ನು ಹಾರಾಟಕ್ಕಾಗಿ ಹಾಗೂ 3 ವಿಮಾನಗಳನ್ನು ಪ್ರದರ್ಶನಕ್ಕಾಗಿ ಉಪಯೋಗಿಸಲಾಗುತ್ತಿದೆ. ಸದರಿ ಶಾಲೆಯು ಬೆಂಗಳೂರು ಮಹಾನಗರಕ್ಕೆ ಸಮೀಪದಲ್ಲಿರುವ 214 ಎಕರೆಗಳ ವಿಸ್ತೀರ್ಣದ 900 ಮೀ ರನ್ ವೇಯನ್ನು ಹೊಂದಿದ್ದು ವಿಮಾನಯಾನ ತರಭೇತಿ ನೀಡಲು ಅನುಕೂಲ ವಾತಾವರಣದಲ್ಲಿರುತ್ತದೆ. ಈ ಸಂಸ್ಥೆಯಲ್ಲಿ ಫ್ಲೈಟ್ ಇನ್‌ಸ್ಟ್ರಕ್ಟರ್ಸ್ ಹಾಗೂ ತಾಂತ್ರಿಕ ತಂಡವಿದ್ದು, ಯಶಸ್ವಿಯಾಗಿ ತರಭೇತಿ ನೀಡುವ ವ್ಯವಸ್ಥೆಗಳನ್ನು ಹೊಂದಿರುತ್ತದೆ. ಸರ್ಕಾರಿ ವೈಮಾನಿಕ ತರಭೇತಿ ಶಾಲೆಯಲ್ಲಿ ತರಭೇತಿ ನೀಡುವುದರ ಜೊತೆಗೆ ಖಾಸಗಿ ಆಪರೇಟರುಗಳಿಗೆ ಲ್ಯಾಂಡಿಂಗ್ ಮತ್ತು ಪಾರ್ಕಿಂಗ್ ಸೌಲಭ್ಯಗಳನ್ನು ಒದಗಿಸುತ್ತಿದೆ.

## ಸಾಂಸ್ಥಿಕ ಸಂರಚನೆ:–

ಸರ್ಕಾರಿ ವೈಮಾನಿಕ ತರಬೇತಿ ಶಾಲೆಯನ್ನು ಸರ್ಕಾರಿ ಆದೇಶ ಸಂಖ್ಯೆ:ಕ.ಫ.7367–69ಃ–1.48–163, ದಿನಾಂಕ:26.03.1949 ರನ್ವಯ ಆರಂಭಗೊಂಡಿತು. ಇಲಾಖೆಯನ್ನು ಆರಂಭಿಸುವ ಪ್ರಮುಖ ಉದ್ದೇಶವು ಆಸಕ್ತ ಯುವಜನತೆಗೆ ವೈಮಾನಿಕ ತರಬೇತಿಯನ್ನು ನೀಡುವ ಸಲುವಾಗಿ ಪ್ರಾರಂಭಿಸಲಾಯಿತು.

# ಆಡಳಿತ ವ್ಯವಸ್ಥೆ:

ಇಲಾಖೆಯ ಆಡಳಿತ ವ್ಯವಸ್ಥೆಯು ಮೂರು ವಿಭಾಗಗಳನ್ನು ಒಳಗೊಂಡಿದೆ.

1. ಆಡಳಿತ ವಿಭಾಗ

2. ಹಾರಾಟ ವಿಭಾಗ

3. ಇಂಜಿನಿಯರಿಂಗ್ ವಿಭಾಗ

## ನಿರ್ದೇಶಕರು

**ಆಡಳಿತ, ಆಪರೇಷನ್ ವಿಭಾಗ ಮತ್ತು ಇಂಜಿನಿಯರಿಂಗ್ ವಿಭಾಗಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲಿಸುವುದು.**

### ಹಾರಾಟ ವಿಭಾಗ

ಮುಖ್ಯ ವಿಮಾನ ಭೋಧಕರು

- ಲಾಗ್ ಪುಸ್ತಕ
- ಲೈಸೆನ್ಸಿಂಗ್
- ಡಿ.ಜಿ.ಸಿ.ಎ. ಯಿಂದ ಅನುಮೋದಿಸಿದ ದಾಖಲೆಗಳು
- ಗ್ರಂಥಾಲಯ
- ವಿದ್ಯಾರ್ಥಿಗಳ ರಿಜಿಸ್ಟರ್
- ಸಿಮುಲೇಟರ್ ಇತ್ಯಾದಿ

### ಇಂಜಿನಿಯರಿಂಗ್ ವಿಭಾಗ

ಮುಖ್ಯ ವಿಮಾನ ನಿರ್ವಹಣಾ ಅಭಿಯಂತರರು

- 7 ವಿಮಾನಗಳ ನಿರ್ವಹಣೆ
- ತಪಾಸಣಾ ಶೆಡ್ಯೂಲ್‌ಗಳು ಮತ್ತು ಇತರ ದಾಖಲೆಗಳು
- ವಿಮಾನಗಳ ಬಿಡಿಭಾಗಗಳ ಉಗ್ರಾಣ ನಿರ್ವಹಣೆ

### ಆಡಳಿತ

ಕಾರ್ಯದರ್ಶಿಗಳು

ಇಲಾಖೆಯ ಆಡಳಿತ, ಹಣಕಾಸು, ನಿರ್ವಹಣೆ, ಲೆಕ್ಕ ತನಿಖೆ, ಮಹಾಲೇಖಪಾಲರ ಮತ್ತು ಡಿ.ಜಿ.ಸಿ.ಎ. ಇವರೊಂದಿಗಿನ ವ್ಯವಹಾರಗಳು ಮತ್ತು ಶಾಲೆಯ ಸಂಪೂರ್ಣ ಜವಾಬ್ದಾರಿ ನಿರ್ವಹಿಸುವುದು.

ಲೆಕ್ಕಪತ್ರ ಅಧೀಕ್ಷಕರು

ರಿಜಿಸ್ಟರ್ಸ್, ಬಿಲ್ಸ್ / ಓಚರ್ಸ್ ನಗದು ಪುಸ್ತಕ, ಸಂಬಳ ಇತ್ಯಾದಿಗಳನ್ನು ನಿರ್ವಹಿಸುವುದು.

# ಸರ್ಕಾರಿ ವೈಮಾನಿಕ ತರಬೇತಿ ಶಾಲೆಯ ಸಿಬ್ಬಂದಿ ವಿವರ:

**ನಿರ್ದೇಶಕರು, ಇಲಾಖಾ ಮುಖ್ಯಸ್ಥರು**

- ಮುಖ್ಯ ವಿಮಾನ ಭೋಧಕರು (1)
  - ಚೀಫ್ ಗ್ರೌಂಡ್ ಇನ್ಸ್‌ಟ್ರಕ್ಟರ್ (1)
  - ಸೇಫ್ಟಿ ಮ್ಯಾನೇಜರ್(1)
  - ಸಹಾಯಕ ವಿಮಾನ ಭೋಧಕರು (2)
  - ಏರೋಡ್ರಂ ಸೂಪರ್‌ವೈಸರ್ (1)
  - ಪ್ಲೈಟ್ ಕ್ಲರ್ಕ್ (1)
  - ವೇಳಾ ಪಾಲಕರು (1)
  - ಸಹಾಯಕ ವೇಳಾ ಪಾಲಕರು (1)
- ಮುಖ್ಯ ವಿಮಾನ ನಿರ್ವಹಣಾ ಅಭಿಯಂತರರು (1)
  - ಸಹಾಯಕ ವಿಮಾನ ನಿರ್ವಹಣಾ ಅಭಿಯಂತರರು(1)
  - ಏರ್‌ಕ್ರಾಫ್ಟ್ ರೇಡಿಯೋ ಮೆನ್‌ಟೆನನ್ಸ್ ಇಂಜಿನಿಯರ್(1)
  - ಕಂಟಿನ್ಯೂಯಿಂಗ್ ಏರ್‌ವರ್ದಿನೆಸ್ ಮ್ಯಾನೇಜರ್ (1)
  - ಉಗ್ರಾಣ ಪಾಲಕ (1)
  - ಸಹಾಯಕ ಉಗ್ರಾಣ ಪಾಲಕ (1)
  - ರೇಡಿಯೋ ಟೆಕ್ನೀಷಿಯನ್ (1)
  - ಸ್ಕಿಲ್ಡ್ ಮೆಕಾನಿಕ್ಸ್ (3)
  - ಸೆಮಿಸ್ಕಿಲ್ಡ್ ಮೆಕಾನಿಕ್ಸ್ (3)
  - ಏರ್‌ಕ್ರಾಫ್ಟ್ ಹ್ಯಾಂಡ್ (3)
  - ಏರ್‌ಕ್ರಾಫ್ಟ್ ಹೆಲ್ಪರ್ (2)
- ಕಾರ್ಯದರ್ಶಿಗಳು (1)
  - ಲೆಕ್ಕಾಧೀಕ್ಷಕರು (1)
  - ಶೀಘ್ರಲಿಪಿಗಾರರು(1)
  - ಪ್ರ.ದ.ಸ. (1)
  - ದ್ವಿ.ದ.ಸ. (2)
  - ಬೆರಳಚ್ಚುಗಾರರು(1)
  - ದಫೇದಾರ್ (1)
  - ಸೈಕಲ್ ಆರ್ಡರ್ಲಿ (1)
  - ಡ್ರೈವರ್ (2)
  - ಅಟೆಂಡರ್ (1)
  - ಕಾವಲುಗಾರರು (6)
  - ಗ್ಯಾಂಗ್ ಕೂಲಿ (5)

# ಸರ್ಕಾರಿ ವೈಮಾನಿಕ ತರಬೇತಿ ಶಾಲೆಯ ಅಧಿಕಾರಿ ಮತ್ತು ನೌಕರರ ಕರ್ತವ್ಯ ಮತ್ತು ಜವಾಬ್ದಾರಿಯ ವಿವರಗಳು

**ಅಟೆಂಡರ್ :**

ಕಛೇರಿಯನ್ನು ಅಚ್ಚುಕಟ್ಟಾಗಿ ಸುಸ್ಥಿತಿಯಲ್ಲಿಡುವುದು, ಕಡತ / ಟಪಾಲುಗಳನ್ನು ವಿವಿಧ ವಿಭಾಗಗಳಿಗೆ ನೀಡುವುದು.

**ಕಾವಲುಗಾರರು:**

ವಿಮಾನ ನಿಲ್ದಾಣ, ರನ್‌ವೇ, ಹ್ಯಾಂಗರ್, ಕಛೇರಿ ಇತ್ಯಾದಿ ಕಾಯುವುದು ಮತ್ತು ಆವರಣದೊಳಗೆ ಅತಿಕ್ರಮಣ ಪ್ರವೇಶವನ್ನು ತಡೆಯುವುದು.

**ಗ್ಯಾಂಗ್ ಕೂಲಿ:**

ವಿಮಾನ ನಿಲ್ದಾಣವನ್ನು ಅಚ್ಚುಕಟ್ಟಾಗಿ ಸುಸ್ಥಿತಿಯಲ್ಲಿಡುವುದು ಮತ್ತು ಇತರೇ ಕೆಲಸಗಳನ್ನು ನಿರ್ವಹಿಸುವುದು.

**ವಾಹನ ಚಾಲಕರು:**

ಶಾಲೆಯ ಇಲಾಖಾ ಮುಖ್ಯಸ್ಥರ ವಾಹನವನ್ನು ಸುಸ್ಥಿತಿಯಲ್ಲಿಡುವುದು ಮತ್ತು ವಾಹನ ಚಾಲನೆಯ ಕಾರ್ಯವನ್ನು ಹಾಗೂ ಅಗ್ನಿಶಾಮಕ ಉಪಕರಣಗಳನ್ನು ಹಾರಾಟ ಚಟುವಟಿಕೆಯ ಸಮಯದಲ್ಲಿ ರನ್‌ವೇ ಬಳಿ ಇರುವುದು ಶಾಲೆಯಲ್ಲಿ ಲಭ್ಯವಿರುವ ಜೀಪ್‌ಅನ್ನು ಉಪಯೋಗಿಸುವುದು.

**ಏರ್‌ಕ್ರಾಫ್ಟ್ ಹೆಲ್ಪರ್ :**

ಪ್ರತಿಯೊಂದು ಹಾರಾಟಕ್ಕೂ ವಿಮಾನವನ್ನು ಸ್ವಚ್ಛಗೊಳಿಸುವುದು, ವಿಮಾನಕ್ಕೆ ಇಂಧನವನ್ನು ಭರ್ತಿ ಮಾಡುವುದು ಮತ್ತಿತರ ಕೆಲಸ ನಿರ್ವಹಿಸುವುದು.

**ಸಹಾಯಕ ಉಗ್ರಾಣ ಪಾಲಕ:**

ಮುಖ್ಯ ಉಗ್ರಾಣ ಪಾಲಕರಿಗೆ ಸಹಾಯ ಮಾಡುವುದು, ಉಗ್ರಾಣವನ್ನು ವ್ಯವಸ್ಥಿತ ರೀತಿಯಲ್ಲಿಡುವುದು ಮತ್ತು ಇತರೇ ಕೆಲಸಗಳು.

**ಉಗ್ರಾಣ ಪಾಲಕ:**

ವಿಮಾನಗಳ ಬಿಡಿಭಾಗಗಳ ದಾಸ್ತಾನು, ಬಿನ್ ಕಾರ್ಡ್, ಲಡ್ಜರ್ ಇತ್ಯಾದಿ ಮತ್ತು ವಿಮಾನಗಳ ಬಿಡಿಭಾಗಗಳನ್ನು ನಿರ್ವಹಿಸುವುದು.

**ಏರ್‌ಕ್ರಾಫ್ಟ್ ಹ್ಯಾಂಡ್:**

ಸ್ಕಿಲ್ಡ್ ಮೆಕಾನಿಕ್ ಮತ್ತು ಸೆಮಿಸ್ಕಿಲ್ಡ್ ಮೆಕಾನಿಕ್ ಇವರುಗಳಿಗೆ ದೈನಂದಿನ ವಿಮಾನಗಳ ನಿರ್ವಹಣೆಗೆ ಸಹಾಯಕರಾಗಿ ಕೆಲಸ ನಿರ್ವಹಿಸುವುದು.

**ಸೆಮಿಸ್ಕಿಲ್ಡ್ ಮೆಕಾನಿಕ್:**

ಸ್ಕಿಲ್ಡ್ ಮೆಕಾನಿಕ್ ಇವರಿಗೆ ದೈನಂದಿನ ವಿಮಾನಗಳ ನಿರ್ವಹಣೆಗೆ ಸಹಾಯಕರಾಗಿ ಕೆಲಸ ನಿರ್ವಹಿಸುವುದು.

**ಸ್ಕಿಲ್ಡ್ ಮೆಕಾನಿಕ್ :**

ದೈನಂದಿನ ವಿಮಾನಗಳ ನಿರ್ವಹಣೆ ಮತ್ತು 25, 50, 100, 400, 800, 1000 ಮತ್ತು 1200 ಅವಧಿಗೆ ಶೆಡ್ಯೂಲ್‌ಗಳನ್ನು ನಿರ್ವಹಿಸುವುದು.

**ಕಂಟಿನ್ಯೂಯಿಂಗ್ ಏರ್‌ವರ್ದಿನೆಸ್ ಮ್ಯಾನೇಜರ್:**

- Monitoring that all the laid down standards, methods and procedures for maintaining continuing Airworthiness of aircraft are complied.
- Approve procedure sheet and inspection schedule of aircraft maintenance task of GFTS. Prepare and approve the level II documents e.g. Ground equipment manual, Hangar maintenance manual, store procedure manual, training procedure manual etc.
- Ensure that continuous airworthiness coordination by management review meeting is conducted to appraise the organization's level of statutory compliance including CAR-M requirements to the Accountable manager as and when required.

**ಏರ್‌ಕ್ರಾಫ್ಟ್ ರೇಡಿಯೋ ಮೆನ್‌ಟೆನನ್ಸ್ ಇಂಜಿನಿಯರ್:**

ವಿಮಾನಗಳಿಗೆ ಅಳವಡಿಸಿರುವ ರೇಡಿಯೋ ಉಪಕರಣಗಳನ್ನು ಪರಿಶೀಲಿಸಿ ಸುಸ್ಥಿತಿಯಲ್ಲಿಡುವುದು.

**ಮುಖ್ಯ ವಿಮಾನ ನಿರ್ವಹಣಾ ಅಭಿಯಂತರರು:**

ಶಾಲೆಯಲ್ಲಿರುವ ಎಲ್ಲಾ ವಿಮಾನಗಳ ನಿರ್ವಹಣೆ, ತಾಂತ್ರಿಕ ವಿಭಾಗದ ಮುಖ್ಯಸ್ಥರಾಗಿ ಕೆಲಸ ನಿರ್ವಹಣೆ, ಪ್ರಮಾಣೀಕರಣ ಇತ್ಯಾದಿಗಳನ್ನು ಪಡೆಯುವ ಪೂರ್ಣ ಜವಾಬ್ದಾರಿ.

**ಸಹಾಯಕ ವಿಮಾನ ನಿರ್ವಹಣಾ ಅಭಿಯಂತರರು:**

ಶಾಲೆಯಲ್ಲಿರುವ ಎಲ್ಲಾ ವಿಮಾನಗಳ ನಿರ್ವಹಣೆ, ಪ್ರಮಾಣೀಕರಣ ಇತ್ಯಾದಿಗಳನ್ನು ಪಡೆಯುವ ಪೂರ್ಣ ಜವಾಬ್ದಾರಿ.

**ಏರೋಡ್ರಂ ಸೂಪರ್ ವೈಸರ್:**

ವಿಮಾನ ನಿಲ್ದಾಣವನ್ನು ಪರಿಶೀಲಿಸುವುದು ಮತ್ತು ಹಾರಾಟ ಚಟುವಟಿಕೆಗೆ ಯೋಗ್ಯವಾಗಿ ನಿರ್ವಹಿಸುವುದು ಮತ್ತು ಪತ್ರ ವ್ಯವಹಾರಗಳನ್ನು ನೋಡಿಕೊಳ್ಳುವುದು. ಲ್ಯಾಂಡಿಂಗ್ ಮತ್ತು ಪಾಕಿಂಗ್ ನಿರ್ವಹಣೆ, ಖಾಸಗಿ ಆಪರೇಟರುಗಳಿಗೆ ಸಂಬಂಧಿಸಿದ ವಿಷಯಗಳ ನಿವರ್ವಹಣೆ.

**ಸೇಫ್ಟಿ ಮ್ಯಾನೇಜರ್:**

The FTO shall establish a Safety Management System (SMS) in accordance with CAR Section 1 Series C part I. The organization shall nominate an Accountable executive and SMS manager (Safety Manager), who shall be responsible for Safety Management System (SMS) implementation.

The organization shall also prepare a SMS manual which shall include safety policy and objectives and other contents for ensuring phase wise implementation.

**ಸಹಾಯಕ ವೇಳಾ ಪಾಲಕರು**:

ವಿಮಾನದ ಹಾರಾಟದ ಅವಧಿಯನ್ನು ದಾಖಲಿಸುವುದು, ವಿಮಾನಗಳ ಲಾಗ್ ಬುಕ್, ಚಾರ್ಟಗಳ ನಿರ್ವಹಣೆ ಹಾಗೂ ಮುಖ್ಯ ವಿಮಾನ ಭೋಧಕರು ಸೂಚಿಸುವ ಕೆಲಸಗಳನ್ನು ನಿರ್ವಹಿಸುವುದು.

**ವೇಳಾ ಪಾಲಕರು:**

ಪ್ಲೈಟ್ ಕ್ಲರ್ಕ್‌ರವರಿಗೆ ಸಹಾಯಕರಾಗಿ ಕೆಲಸ ನಿರ್ವಹಿಸುವುದು.

**ಪ್ಲೈಟ್ ಕ್ಲರ್ಕ್:**

ವಿದ್ಯಾರ್ಥಿಗಳ ಲಾಗ್ ಬುಕ್, ಡಿಜಿಸಿಎ ಪತ್ರ ವ್ಯವಹಾರಗಳು, ಲ್ಯಾಂಡಿಂಗ್ ಮತ್ತು ಪಾರ್ಕಿಂಗ್ ಶುಲ್ಕ ನಿರ್ವಹಿಸುವುದು, ಏಟಿಸಿ ಹವಾಮಾನ ಇಲಾಖೆಯಿಂದ ಅನುಮತಿ ಪಡೆಯುವುದು ಇತ್ಯಾದಿ.

**ಸಹಾಯಕ ವಿಮಾನ ಭೋದಕರು**:

ಹಾರಾಟ ಚಟುವಟಿಕೆ ನಡೆಸಲು ಮುಖ್ಯ ವಿಮಾನ ಭೋಧಕರಿಗೆ ಸಹಾಯಕರಾಗಿ ಕರ್ತವ್ಯ ನಿರ್ವಹಿಸುವುದು.

**ಮುಖ್ಯ ವಿಮಾನ ಭೋಧಕರು**:

ಹಾರಾಟ ಚಟುವಟಿಕೆಯ ಸಂಪೂರ್ಣ ಜವಾಬ್ದಾರಿ.

**ಚೀಫ್ ಗ್ರೌಂಡ್ ಇನ್ಸ್‌ಟ್ರಕ್ಟರ್ :**

ವಿದ್ಯಾರ್ಥಿಗಳಿಗೆ ಗ್ರೌಂಡ್ ತರಗತಿಗಳನ್ನು ತೆಗೆದುಕೊಳ್ಳುವುದು.

**ಸೈಕಲ್ ಆರ್ಡರ್ಲಿ**:

ಖಜಾನೆ, ಟಪಾಲು, ಆರ್.ಬಿ.ಐ. ಮತ್ತಿತರ ಕೆಲಸ ಕಾರ್ಯಗಳನ್ನು ನಿರ್ವಹಿಸುವುದು.

**ದ್ವಿತೀಯ ದರ್ಜೆಯ ಸಹಾಯಕರು /ನಗದು ಗುಮಾಸ್ತರು:**

ಇಲಾಖೆಯ ದೈನಂದಿನ ಕೆಲಸ ಕಾರ್ಯವನ್ನು ನಿರ್ವಹಿಸುವುದು. ಕಛೇರಿಯ ನಗದು ಪುಸ್ತಕ ನಿರ್ವಹಣೆ, ಡಿ.ಸಿ. ಬಿಲ್, ಎ.ಸಿ. ಬಿಲ್ ಜಮಾ ನಿರ್ವಹಣೆ, ಇ.ಎಸ್.ಟಿ ಸಂಬಂಧಿಸಿದ ವಿಷಯಗಳು.

**ಬೆರಳಚ್ಚುಗಾರರು**:

ಬೆರಳಚ್ಚು ಕಾರ್ಯವನ್ನು ನಿರ್ವಹಿಸುವುದು.

**ಶೀಘ್ರಲಿಪಿಗಾರರು**:

ಶೀಘ್ರಲಿಪಿಗಾರರ ಕರ್ತವ್ಯ ನಿರ್ವಹಿಸುವುದು ಮತ್ತು ಇಲಾಖಾ ಮುಖ್ಯಸ್ಥರು ಸೂಚಿಸುವ ಇತರೇ ಕೆಲಸಗಳನ್ನು ನಿರ್ವಹಿಸುವುದು.

**ಪ್ರಥಮ ದರ್ಜೆಯ ಸಹಾಯಕರು:**

ಸರ್ಕಾರದ ಪತ್ರಗಳಿಗೆ ಉತ್ತರಿಸುವುದು, ಅಪೆಂಡಿಕ್ಸ್ ಬಿ ಹಾಗೂ ಆಯವ್ಯಯ ಅಂದಾಜು ತಯಾರಿಕೆ, ಲೆಕ್ಕ ಸಮನ್ವಯ, ಇಲಾಖೆಯ ಸಭೆಗಳಿಗೆ ಸಂಬಂಧಿಸಿದ ವಿಷಯಗಳ ನಿರ್ವಹಣೆ, ಸಹಾಯಕ ಮಾಹಿತಿ ಅಧಿಕಾರಿಯಾಗಿ ಹಾಗೂ ಇಲಾಖೆಯ ದೈನಂದಿನ ಕೆಲಸ ಕಾರ್ಯವನ್ನು ನಿರ್ವಹಿಸುವುದು.

**ಲೆಕ್ಕಪತ್ರ ಅಧೀಕ್ಷಕರು:**

ಇಲಾಖೆಯ ಆಯವ್ಯಯ, ಲೆಕ್ಕ ತನಿಖೆ, ಲೆಕ್ಕಪತ್ರ, ಮಹಾಲೇಖಪಾಲರ ಲೆಕ್ಕಗಳೊಂದಿಗೆ ಹೊಂದಾಣಿಕೆ, ಅನುದಾನ ಮತ್ತು ಕಾರ್ಯದರ್ಶಿಯವರಿಗೆ ಸಹಾಯ ಮಾಡುವುದು.

**ಕಾರ್ಯದರ್ಶಿಗಳು:**

ಇಲಾಖಾ ಮುಖ್ಯಸ್ಥರಿಗೆ ಇಲಾಖೆಯ ಆಡಳಿತ, ಹಣಕಾಸು, ನಿರ್ವಹಣೆ, ಲೆಕ್ಕ ತನಿಖೆ, ಮಹಾಲೇಖಪಾಲರ ಮತ್ತು ಡಿ.ಜಿ.ಸಿ.ಎ. ಇವರೊಂದಿಗಿನ ವ್ಯವಹಾರಗಳು ಮತ್ತು ಇಲಾಖೆಯ ಸಂಪೂರ್ಣ ಜವಾಬ್ದಾರಿ ನಿರ್ವಹಿಸುವುದು.

**ನಿರ್ದೇಶಕರು**:

ಇಲಾಖಾ ಮುಖ್ಯಸ್ಥರು.

# ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದ ದೂರವಾಣಿ ಸಂಖ್ಯೆ

| ಕ್ರ. ಸಂ. | ಹುದ್ದೆಯ ಹೆಸರು | ಅಧಿಕಾರಿ / ನೌಕರರ ಹೆಸರು ಶ್ರೀಯುತರು | ಕಛೇರಿ ದೂರವಾಣಿ ಸಂಖ್ಯೆ |
|---|---|---|---|
| 1 | ನಿರ್ದೇಶಕರು | ಅನುಮಪ್ ಅಗರ್‌ವಾಲ್ ಐ.ಪಿ.ಎಸ್. | 23627278 |
| 2 | ಲೆಕ್ಕಾಧೀಕ್ಷಕರು | ಕೆ.ವಿ.ರಾಜಲಕ್ಷ್ಮಿ | 23332251 |
| 3 | ಪ್ರಥಮ ದರ್ಜೆ ಸಹಾಯಕರು | ಪಿ.ಸಿ. ಮಂಜುಳ | ---- |
| 4 | ದ್ವಿತೀಯ ದರ್ಜೆ ಸಹಾಯಕರು | ದೇವರಾಜ ಎನ್.ಟಿ. | ---- |
| 5 | ದ್ವಿತೀಯ ದರ್ಜೆ ಸಹಾಯಕರು | ಶಶಿಕಲಾ .ಕೆ. | ---- |
| 6 | ಏರ್‌ಕ್ರಾಫ್ಟ್ ಹ್ಯಾಂಡ್ | ಚಂಚಲಯ್ಯ | ---- |
| 7 | ಏರ್‌ಕ್ರಾಫ್ಟ್ ಹೆಲ್ಪರ್ | ಕೆ. ಶ್ರೀಧರ್ | ---- |
| 8 | ದಫೇದಾರ್ | ಈ. ಕೃಷ್ಣಮೂರ್ತಿ | ---- |
| 9 | ಅಟೆಂಡರ್ | ವಿ.ಆರ್. ಗರುಡಪ್ಪ | ---- |
| 10 | ಕಾವಲುಗಾರರು | ಎಂ. ಹರೀಶ್ | ---- |
| 11 | ಕಾವಲುಗಾರರು | ಕೆ. ನಾಗೇಶ್ | ---- |

## ಗುತ್ತಿಗೆ ಆಧಾರ:

| ಕ್ರ. ಸಂ. | ಹುದ್ದೆಯ ಹೆಸರು | ಅಧಿಕಾರಿ / ನೌಕರರ ಹೆಸರು ಶ್ರೀಯುತರು | ಕಛೇರಿ ದೂರವಾಣಿ ಸಂಖ್ಯೆ |
|---|---|---|---|
| 1 | ಮುಖ್ಯ ವಿಮಾನ ಬೋಧಕರು | ವಿಂಗ್ ಕಮಾಂಡರ್ ಅಮರ್‌ಜೀತ್ ಸಿಂಗ್ ಡಾಂಗೆ | 23332251 |
| 2 | ಮುಖ್ಯ ವಿಮಾನ ನಿರ್ವಹಣಾ ಅಭಿಯಂತರರು (ಮೆಂಟೆನನ್ಸ್ ಮ್ಯಾನೇಜರ್) | ಸಾದತ್ ಬೇಗ್ | 23332251 |
| 3 | ಸಹಾಯಕ ವಿಮಾನ ನಿರ್ವಹಣಾ ಅಭಿಯಂತರರು (ಕ್ವಾಲಿಟಿ ಮ್ಯಾನೇಜರ್) | ಬಿ. ಭಾಸ್ಕರ್ | 23332251 |
| 4 | ಸಹಾಯಕ ವಿಮಾನ ಬೋಧಕರು | ಕ್ಯಾಪ್ಟನ್ ಅನುರಾಧ ಸಂಗ್ವಾನ್ | 23332251 |
| 5 | ಸಹಾಯಕ ವಿಮಾನ ಬೋಧಕರು | ಕ್ಯಾಪ್ಟನ್ ಅಮಿತ್ ಸೋಬ್ತಿ | 23332251 |
| 6 | ಚೀಫ್ ಗ್ರೌಂಡ್ ಇನ್ಸ್‌ಟ್ರಕ್ಟರ್ (ಹೊರಸಂಪನ್ಮೂಲ) | ಗ್ರೂಪ್ ಕ್ಯಾಪ್ಟನ್ (ನಿವೃತ್ತ) ವಿ. ಸೆಹಗಲ್ | 23332251 |
| 7 | ಏರೋಡ್ರಂ ಸೂಪರ್ ವೈಸರ್ (ಹೊರಸಂಪನ್ಮೂಲ) | ಎ.ಎನ್. ವಿಶ್ವನಾಥ | 23332251 |

## ಹಾಟ್‌ಲೈನ್ ನಂಬರ್‌ಗಳು:

| ಕ್ರ.ಸಂ. | ವಿಮಾನ ನಿಲ್ದಾಣದ ಹೆಸರು | ಹಾಟ್ ಲೈನ್ ಸಂಖ್ಯೆ |
|---|---|---|
| 1 | ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ | 27688034 |
| 2 | ಹೆಚ್.ಎ.ಎಲ್. | 25270647 |
| 3 | ಯಲಹಂಕ ಏರ್‌ಫೋರ್ಸ್ | 28478022 |

# ಸಂಸ್ಥೆಯ ವಿವರಗಳು :

ಸರ್ಕಾರಿ ವೈಮಾನಿಕ ತರಬೇತಿ ಶಾಲೆ(GFTS) ಜಕ್ಕೂರು, ಬೆಂಗಳೂರು 1949ರಲ್ಲಿ ಪ್ರಾರಂಭವಾಯಿತು ಮತ್ತು ದೇಶದ ಹಾರಾಡ ತರಬೇತಿ ಶಾಲೆಗಳಲ್ಲಿ ಒಂದಾಗಿರುತ್ತದೆ. ಇದು ಕರ್ನಾಟಕ ರಾಜ್ಯ ಸರ್ಕಾರದ ಒಡೆತನದ ಹಾರಾಟ ತರಬೇತಿ ಶಾಲೆಯಾಗಿದ್ದು ವಾಣಿಜ್ಯ ಪೈಲೆಟ್ ಲೈಸೆನ್ಸ್ ಮತ್ತು ಖಾಸಗಿ ಪೈಲೆಟ್ ಲೈಸೆನ್ಸ್ ತರಬೇತಿಗಳನ್ನು ಆಸಕ್ತ ಅಭ್ಯರ್ಥಿಗಳಿಗೆ ನೀಡುತ್ತಿದೆ. ಸರ್ಕಾರಿ ವೈಮಾನಿಕ ತರಬೇತಿ ಶಾಲೆಯು ಜಾಗತಿಕ ಮಟ್ಟದ ವೈಮಾನಿಕ ತರಬೇತಿ ಸೌಲಭ್ಯಗಳನ್ನು ಹೊಂದಿದ್ದು ಎಲ್ಲಾ ಮಟ್ಟದ ಪೈಲೆಟ್ ತರಬೇತಿಯನ್ನು ನೀಡುತ್ತಿದೆ. 214 ಎಕರೆ ವಿಸ್ತೀರ್ಣದಲ್ಲಿರುವ ಶಾಲೆಯು ವೈಮಾನಿಕ ತರಬೇತಿ ಸೌಲಭ್ಯ, ಖಾಸಗಿಯವರಿಗೆ ಹ್ಯಾಂಗರ್ ಸೌಲಭ್ಯ, ನಿರ್ವಹಣಾ ಚಟುವಟಿಕೆ ಮತ್ತು ಸಾಮಾನ್ಯ ಸೌಲಭ್ಯಗಳಾದ ಏರ್‌ಸ್ಟ್ರಿಪ್, ಇಂಧನ ಮುಂತಾದವುಗಳನ್ನು ನೀಡಲಾಗುತ್ತಿದೆ.

ಶ್ರೀ. ಪ್ರಮೋದ್ ಮಧ್ವರಾಜ್
ಮಾನ್ಯ. ಸಚಿವರು,
ಮೀನುಗಾರಿಕೆ, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ.
ಕರ್ನಾಟಕ ಸರ್ಕಾರ,

ಶ್ರೀ ರಜನೀಶ್ ಗೋಯಲ್ ಐ.ಎ.ಎಸ್.,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು.

ಶ್ರೀ ಅನುಪಮ್ ಅಗರ್‌ವಾಲ್ ಐ.ಪಿ.ಎಸ್.
ನಿರ್ದೇಶಕರು
ಸರ್ಕಾರಿ ವೈಮಾನಿಕ ತರಬೇತಿ ಶಾಲೆ,
ಜಕ್ಕೂರು ವಿಮಾನ ನಿಲ್ದಾಣ,
ಯಲಹಂಕ ಅಂಚೆ,
ಬೆಂಗಳೂರು–560064

ವಿಂಗ್ ಕಮಾಂಡರ್: ಅಮರ್‌ಜಿತ್ ಸಿಂಗ್ ಡಾಂಗೆ,
ಮುಖ್ಯ ವಿಮಾನ ಬೋಧಕರು,
ಸರ್ಕಾರಿ ವೈಮಾನಿಕ ತರಬೇತಿ ಶಾಲೆ,
ಜಕ್ಕೂರು ವಿಮಾನ ನಿಲ್ದಾಣ,
ಯಲಹಂಕ ಅಂಚೆ,
ಬೆಂಗಳೂರು–560064

ಗ್ರೂಪ್ ಕ್ಯಾಪ್ಟನ್ ವಿ.ಸೆಹಗಲ್
ಚೀಫ್ ಗ್ರೌಂಡ್ ಇನ್‌ಸ್ಟ್ರಕ್ಟರ್,
ಸರ್ಕಾರಿ ವೈಮಾನಿಕ ತರಬೇತಿ ಶಾಲೆ,
ಜಕ್ಕೂರು ವಿಮಾನ ನಿಲ್ದಾಣ,
ಯಲಹಂಕ ಅಂಚೆ,
ಬೆಂಗಳೂರು–560064.

ಶ್ರೀ ಸಾದತ್ ಬೇಗ್
ಮುಖ್ಯ ವಿಮಾನ ನಿರ್ವಹಣಾ ಅಭಿಯಂತರು(ಮೆಂಟೆನೆನ್ಸ್ ಮ್ಯಾನೇಜರ್),
ಸರ್ಕಾರಿ ವೈಮಾನಿಕ ತರಬೇತಿ ಶಾಲೆ,
ಜಕ್ಕೂರು ವಿಮಾನ ನಿಲ್ದಾಣ,
ಯಲಹಂಕ ಅಂಚೆ,
ಬೆಂಗಳೂರು–560064

ಶ್ರೀ.ಬಿ.ಭಾಸ್ಕರ್,
ಸಹಾಯಕ ವಿಮಾನ ನಿರ್ವಹಣಾ ಅಭಿಯಂತರು (ಕ್ವಾಲಿಟಿ ಮ್ಯಾನೇಜರ್),
ಸರ್ಕಾರಿ ವೈಮಾನಿಕ ತರಬೇತಿ ಶಾಲೆ,
ಜಕ್ಕೂರು ವಿಮಾನ ನಿಲ್ದಾಣ,
ಯಲಹಂಕ ಅಂಚೆ,
ಬೆಂಗಳೂರು–560064.

ಕ್ಯಾಪ್ಟನ್ ಅನುರಾಧ ಸಂಗ್ವಾನ್
ಸಹಾಯಕ ವಿಮಾನ ಬೋಧಕರು,
ಸರ್ಕಾರಿ ವೈಮಾನಿಕ ತರಬೇತಿ ಶಾಲೆ,
ಜಕ್ಕೂರು ವಿಮಾನ ನಿಲ್ದಾಣ,
ಯಲಹಂಕ ಅಂಚೆ,
ಬೆಂಗಳೂರು–560064.

ಕ್ಯಾಪ್ಟನ್ ಅಮಿತ್ ಸೋಬ್ತಿ
ಸಹಾಯಕ ವಿಮಾನ ಬೋಧಕರು,
ಸರ್ಕಾರಿ ವೈಮಾನಿಕ ತರಬೇತಿ ಶಾಲೆ,
ಜಕ್ಕೂರು ವಿಮಾನ ನಿಲ್ದಾಣ,
ಯಲಹಂಕ ಅಂಚೆ,
ಬೆಂಗಳೂರು–560064.

ತರಬೇತಿ ವಿವರಗಳು:–

ನೀಡಲಾಗುವ ಕೋರ್ಸುಗಳು:–

ಸರ್ಕಾರಿ ವೈಮಾನಿಕ ತರಬೇತಿ ಶಾಲೆಯಲ್ಲಿ ಸರಾಸರಿ 20–25 ವಿದ್ಯಾರ್ಥಿಗಳನ್ನು ವಾಣಿಜ್ಯ ಪೈಲೆಟ್ ಲೈಸೆನ್ಸ್ ಮತ್ತು ಖಾಸಗಿ ಪೈಲೆಟ್ ಲೈಸೆನ್ಸ್ ತರಬೇತಿಗಾಗಿ ತೆಗೆದುಕೊಳ್ಳಲಾಗುತ್ತಿದೆ. ವಾಣಿಜ್ಯ ಪೈಲೆಟ್ ಲೈಸೆನ್ಸ್ ತರಬೇತಿಯ ಅವಧಿ ಅಂದಾಜು 24 ತಿಂಗಳುಗಳಾಗಿದ್ದು ಕನಿಷ್ಟ 200 ಗಂಟೆಗಳ ಹಾರಾಟ ಅಗತ್ಯವನ್ನು ಹೊಂದಿರುತ್ತದೆ. ಖಾಸಗಿ ಪೈಲೆಟ್ ಲೈಸೆನ್ಸ್ ತರಬೇತಿ ಅವಧಿಯು ಅಂದಾಜು 12 ತಿಂಗಳಾಗಿದ್ದು ಕನಿಷ್ಟ 40 ಗಂಟೆಗಳ (ಡಿ.ಜಿ.ಸಿ.ಎ ನಿಯಮಾನುಸಾರ) ಅವದಿಯ ಹಾರಾಟವನ್ನು ಪೂರ್ಣಗೊಳಿಸಬೇಕಾಗಿರುತ್ತದೆ. ವಾಣಿಜ್ಯ ಪೈಲೆಟ್ ಲೈಸೆನ್ಸ್ ಮತ್ತು ಖಾಸಗಿ ಪೈಲೆಟ್ ಲೈಸೆನ್ಸ್ ತರಬೇತಿ ಕಾರ್ಯಕ್ರಮವು courses in Air Regulation, Air Navigation, Meterology,Aircraft General, Technical specific Aircraft & Engines ಗಳನ್ನೊಳಗೊಂಡಿರುತ್ತದೆ.

**ಸ್ಟೂಡೆಂಟ್ ಪೈಲಟ್ ಲೈಸೆನ್ಸ್ (ಎಸ್.ಪಿ.ಎಲ್)**

ವಾಣಿಜ್ಯ ಪೈಲೆಟ್ ಲೈಸೆನ್ಸ್ ಮತ್ತು ಖಾಸಗಿ ಪೈಲೆಟ್ ಲೈಸೆನ್ಸ್ ತರಬೇತಿಗಾಗಿ ಸ್ಟೂಸೆಂಟ್ ಪೈಲೆಟ್ ಲೈಸೆನ್ಸ್ (ಎಸ್.ಪಿ.ಎಲ್) ಪಡೆಯುವ ಸಲುವಾಗಿ ಅಗತ್ಯವಾಇಗರುತ್ತದೆ. ಕನಿಷ್ಟ ವಯೋಮಿತಿ 16 ವರ್ಷಗಳು,

–10 ನೇ ತರಗತಿಯಲ್ಲಿ ಉತ್ತೀರ್ಣತೆ

–ವೈಮಾನಿಕ ಉಡ್ಡಯನದ ಅನುಭವದ ಅವಶ್ಯಕತೆ ಇರುವುದಿಲ್ಲ.

–ಗರಿಷ್ಟ ವಯೋಮಿತಿಯ ಮಿತಿ ಇರುವುದಿಲ್ಲ.

**ಖಾಸಗಿ ಪೈಲೆಟ್ ಲೈಸೆನ್ಸ್ (ಪಿ.ಪಿ.ಎಲ್)**

ಕನಿಷ್ಟ ವಯೋಮಿತಿ 17 ವರ್ಷಗಳು,

–10 ನೇ ತರಗತಿಯಲ್ಲಿ ಉತ್ತೀರ್ಣತೆ

–40 ಗಂಟೆಗಳ ಹಾರಾಟ ತರಬೇತಿ ಜೊತೆಗೆ ಪ್ರಾಯೋಗಿಕ ಹಾಗೂ ಲಿಖಿತ ಪರೀಕ್ಷೆ

–ಅವಧಿ 12 ತಿಂಗಳುಗಳು.

– ಗರಿಷ್ಟ ವಯೋಮಿತಿಯ ಮಿತಿ ಇರುವುದಿಲ್ಲ.

**ವಾಣಿಜ್ಯ ಪೈಲೆಟ್ ಲೈಸೆನ್ (ಸಿ.ಪಿ.ಎಲ್)**

ಕನಿಷ್ಟ ವಯೋಮಿತಿ 17 ವರ್ಷಗಳು,

–10+2 ನೇ ತರಗತಿ, ಅಂಗೀಕೃತ ಬೋರ್ಡ್ ಅಥವಾ ಸಮಾನ ವಿದ್ಯಾರ್ಹತೆ ಭೌತಶಾಸ್ತ್ರ ಮತ್ತು ಗಣಿತ ವಿಷಯಗಳೊಂದಿಗೆ ಉತ್ತೀರ್ಣತೆ

–200 ಗಂಟೆಗಳ ಹಾರಾಟ ತರಬೇತಿ ಜೊತೆಗೆ ಪ್ರಾಯೋಗಿಕ ಹಾಗೂ ಲಿಖಿತ ಪರೀಕ್ಷೆ

–ಅವಧಿ 24 ತಿಂಗಳುಗಳು.

– ಗರಿಷ್ಟ ವಯೋಮಿತಿಯ ಮಿತಿ ಇರುವುದಿಲ್ಲ ಆದರೆ 35 ವರ್ಷ ವಯೋಮತಿ ಮೀರಿದವರಿಗೆ ಏರ್‌ಲೈನ್ ನೇಮಕಾತಿಗೆ ಪರಿಗಣಿಸದ ಕಾರಣ ಉಪಯುಕ್ತವಲ್ಲ.

**ವೈದ್ಯಕೀಯ ಅರ್ಹತೆ**

ಉತ್ತಮ ದೇಹದಾರ್ಢ್ಯತೆ, ಉತ್ತಮ ದೃಷ್ಟಿ ಮತ್ತು ಭಾರತೀಯ ಏರ್‌ಕ್ರಾಫ್ಟ್ ನಿಮಯಮಗಳ ಅನುಸಾರ ವೈದ್ಯಕೀಯ ಅರ್ಹತೆ ಹೊಂದಿರಬೇಕು. ಅಭ್ಯರ್ಥಿಗಳು ಡಿ.ಜಿ.ಸಿ.ಎ ಅನುಮೋದಿತ ವೈದ್ಯಾಧಿಕಾರಿಗಳಿಂದ/ವೈದ್ಯಕೀಯ ಮಂಡಳಿಯಿಂದ ವೈದ್ಯಕೀಯ ಪರೀಕ್ಷೆಗೆ ಒಳಪಟ್ಟು ಅರ್ಹತೆ ಪಡೆಯಬೇಕು. ಅರ್ಹತೆಯು ಮಹಾನಿರ್ದೇಶಕರು, ನಾಗರೀಕ ವಿಮಾನಯಾನ ನವದೆಹಲಿ ರವರ ಪುನರಾವಲೋಕನಕ್ಕೆ ಒಳಪಡುತ್ತದೆ.

ಸರ್ಕಾರಿ ವೈಮಾನಿಕ ತರಬೇತಿ ಶಾಲೆಯು 200 ಅವಧಿಗಳ ತರಗತಿಗಳನ್ನು ವಾಣಿಜ್ಯ ಪೈಲೆಟ್ ಲೈಸೆನ್ಸ್ ಮತ್ತು ಖಾಸಗಿ ಪೈಲೆಟ್ ಲೈಸೆನ್ಸ್ ಕೋರ್ಸುಗಳಿಗಾಗಿ ನಡೆಸಲಾಗಿದೆ. ಒಬ್ಬ ಚೀಫ್ ಗ್ರೌಂಡ್ ಇನ್‌ಸ್ಟ್ರಕ್ಟರ್ ಮತ್ತು ಒಬ್ಬ ಗ್ರೌಂಡ್ ಇನ್‌ಸ್ಟ್ರಕ್ಟರ್ ಗಳನ್ನು ಒಳಗೊಂಡಿರುತ್ತದೆ.

ಸರ್ಕಾರಿ ವೈಮಾನಿಕ ತರಬೇತಿ ಶಾಲೆಯಲ್ಲಿ ಒಟ್ಟು 37 ಸಿಬ್ಬಂದಿಗಳಿರುತ್ತಾರೆ. ಮುಖ್ಯ ವಿಮಾನ ಬೋಧಕರು–1, ಮುಖ್ಯ ವಿಮಾನ ನಿರ್ವಹಣಾ ಅಭಿಯಂತರು–1, ಸಹಾಯಕ ವಿಮಾನ ನಿರ್ವಹಣಾ ಅಭಿಯಂತರು–1 , ಸಹಾಯಕ ವಿಮಾನ ಬೋಧಕರು–2, ಮುಖ್ಯ ಗ್ರೌಂಡ್ ಇನ್‌ಸ್ಟ್ರಕ್ಟರ್–1, ಸ್ಕಿಲ್ಡ್ ಮೆಕ್ಯಾನಿಕ್–3, ಸೆಮಿ ಸ್ಕಿಲ್ಡ್ ಮೆಕ್ಯಾನಿಕ್–3, ಉಗ್ರಾಣ ಪಾಲಕ –1, ಸಹಾಯಕ ಉಗ್ರಾಣ ಪಾಲಕ–1, ಏರ್‌ಕ್ರಾಫ್ಟ್ ಹ್ಯಾಂಡ್ –2, ಏರ್‌ಕ್ರಾಫ್ಟ್ ಹೆಲ್ಪರ್–2, ಟೈಂ ಕೀಪರ್–1, ಸಹಾಯಕ ವೇಳಾ ಪಾಲಕರು–1, ಏರೋಡ್ರಂ ಸೂಪರ್‌ವೈಸರ್–1, ಫ್ಲೈಟ್ ಕ್ಲರ್ಕ್–1 ಮತ್ತು ಏರ್ ಟ್ರಾಫಿಕ್ ಕಂಟ್ರೋಲರ್–2

## ಶುಲ್ಕದ ಮಾಹಿತಿ:

ತರಬೇತಿ ನೀಡುವ ಸ್ಥಳ : ಜಕ್ಕೂರು ವಿಮಾನ ನಿಲ್ದಾಣ, ಬೆಂಗಳೂರು

ಸಮಯ : ಪ್ರತಿದಿನ ಬೆಳಿಗ್ಗೆ 8.00 ಗಂಟೆಯಿಂದ 2.00 ಗಂಟೆಯವರೆಗೆ

ಅರ್ಜಿ ಶುಲ್ಕ : ರೂ. 4000/–ಗಳನ್ನು ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಪಾವತಿಸುವುದು (ಡಿ.ಡಿ. ಮೂಲಕ)

ದಾಖಲಾತಿ ವೆಚ್ಚ : ರೂ. 25,000/–ಗಳನ್ನು ದಾಖಲಾತಿ ಸಮಯದಲ್ಲಿ ಪಾವತಿಸುವುದು (ಡಿ.ಡಿ. ಮೂಲಕ)

ಗ್ರೌಂಡ್ ತರಗತಿಗಳ ವೆಚ್ಚ : ರೂ. 1,00,000/–ಗಳನ್ನು ದಾಖಲಾತಿ ಸಮಯದಲ್ಲಿ ಪಾವತಿಸುವುದು (ಡಿ.ಡಿ. ಮೂಲಕ)

ಹಾರಾಟ ಶುಲ್ಕದ ದರಗಳು: ಸೆಸ್ನಾ–152 : ರೂ.10,000/– ಪ್ರತಿ ಗಂಟೆಗೆ

ಸೆಸ್ನಾ–172 : ರೂ.10,000/– ಪ್ರತಿ ಗಂಟೆಗೆ

* ಇಂಧನದ ದರಗಳ ಅನ್ವಯ ಹಾರಾಟ ಶುಲ್ಕದ ದರಗಳನ್ನು ಯಾವುದೇ ನೋಟೀಸ್ ಇಲ್ಲದೆ ಬದಲಾಯಿಸಲಾಗುತ್ತದೆ.

ಫ್ಲೈಟ್ ಸಿಮುಲೇಟರ್ ದರ: ಶಾಲೆಯ ನೊಂದಾಯಿತ ವಿದ್ಯಾರ್ಥಿಗಳಿಗೆ ರೂ. 1000/– ಪ್ರತಿ ಗಂಟೆಗೆ ಹಾಗೂ ನೊಂದಾಯಿತರಲ್ಲದ ಅಭ್ಯರ್ಥಿಗಳಿಗೆ ರೂ. 1500/– ಪ್ರತಿ ಗಂಟೆಗೆ.

ನೀಡಲಾಗುವ ಪ್ಯಾಕೇಜ್‌ಗಳು:

1. ಸೆಸ್ನಾ–152 ಮತ್ತು ಸೆಸ್ನಾ–172 ವಿಮಾನಗಳಲ್ಲಿ ಸಿ.ಪಿ.ಎಲ್ ಹೊಂದಲು : 20 ಲಕ್ಷಗಳು
2. ಸೆಸ್ನಾ–172 ಮತ್ತು ಸೆಸ್ನಾ–152 ವಿಮಾನಗಳಲ್ಲಿ ಸಿ.ಪಿ.ಎಲ್ ಹೊಂದಲು : 23 ಲಕ್ಷಗಳು
3. ಸೆಸ್ನಾ–152 ಮತ್ತು ಸೆಸ್ನಾ–172 ವಿಮಾನಗಳಲ್ಲಿ (ಪ್ರತಿ ವಿಮಾನದಲ್ಲಿ 100 ಗಂಟೆಗಳ ಸಿ.ಪಿ.ಎಲ್ ಹೊಂದಲು : 22 ಲಕ್ಷಗಳು
4. ಸೆಸ್ನಾ–152 ವಿಮಾನದಲ್ಲಿ ಪಿ.ಪಿ.ಎಲ್ ಹೊಂದಲು: 06 ಲಕ್ಷಗಳು

ಮೇಲ್ಕಂಡ ಎಲ್ಲಾ ಪ್ಯಾಕೇಜ್‌ಗಳಲ್ಲಿ ದಾಖಲಾತಿ ಶುಲ್ಕ, ಗ್ರೌಂಡ್ ತರಗತಿಗಳು ಮತ್ತು ಹಾರಾಟ ತರಬೇತಿ ವೆಚ್ಚಗಳು ಸೇರಿಕೊಂಡಿರುತ್ತದೆ.

ಪಾವತಿಸುವ ವಿಧಾನ: –

ಸಿ.ಪಿ.ಎಲ್. ಗೆ ದಾಖಲಾತಿ ಸಮಯದಲ್ಲಿ ರೂ. 6.00 ಲಕ್ಷಗಳು, ಉಳಿದ ಮೊತ್ತವನ್ನು 3 ಸಮಕಂತುಗಳಲ್ಲಿ 3 ತಿಂಗಳಗಳ ಅಂತರಗಳಲ್ಲಿ ಪಾವತಿಸುವುದು

ಪಿ.ಪಿ.ಎಲ್. ತರಬೇತಿಗೆ ರೂ. 6.00 ಲಕ್ಷಗಳನ್ನು ದಾಖಲಾತಿ ಸಮಯದಲ್ಲಿ ಪಾವತಿಸುವುದು.

ಇತರೆ ಮಾಹಿತಿಗಳು: ವಿದ್ಯಾರ್ಥಿ ನಿಲಯದ ಸೌಲಭ್ಯ ಇರುವುದಿಲ್ಲ. ಅಭ್ಯರ್ಥಿಗಳು ಸ್ವತಃ ಊಟ, ವಸತಿ ಮತ್ತು ಸಾರಿಗೆ ವ್ಯವಸ್ಥೆ ತಾವೇ ಮಾಡಿಕೊಳ್ಳಬೇಕು

ದಾಖಲಾತಿ ವಿಧಾನ:

ಸಿ.ಪಿ.ಎಲ್/ಪಿ.ಪಿ.ಎಲ್ ಕೋರ್ಸುಗಳಿಗೆ ದಾಖಲಾತಿಗಾಗಿ ಅರ್ಜಿಯನ್ನು ಇಲಾಖೆಯ ವೆಬ್‌ಸೈಟಿನಿಂದ ಡೌನ್‌ಲೋಡ್ ಮಾಡಿಕೊಂಡು ಸಲ್ಲಿಸಬೇಕು. ಅಭ್ಯರ್ಥಿಗಳು ಲಿಖಿತ ಪರೀಕ್ಷೆಗೆ, ಸಂದರ್ಶನಕ್ಕೆ, ಪೈಲೆಟ್ ಆಪ್ಟಿಟ್ಯೂಡ್ ಪರೀಕ್ಷೆ ಮತ್ತು ವೈದ್ಯಕೀಯ ಅರ್ಹತೆಯನ್ನು ದಾಖಲಾತಿಗೆ ಮುನ್ನ ಹಾಜರುಪಡಿಸಬೇಕಾಗುತ್ತದೆ.

**ಸಂಪರ್ಕ:ವಿಂ:ಕ: ಅಮರ್‌ಜಿತ್ ಸಿಂಗ್ ಡಾಂಗೆ**

*ಮುಖ್ಯ ವಿಮಾನ ಬೋಧಕರು*
**ದೂರವಾಣಿ: 080–23332251**
**ಮೊಬೈಲ್: +91998665678**

**ಸಹಾಯಕ ವಿಮಾನ ಬೋಧಕರು**

**ಮೊಬೈಲ್ : +91 8637328480 / 9990 101974**

**ಇ–ಮೇಲ್ ವಿಳಾಸ: gfts.kar@gmail.com**

## ಮೂಲ ಸೌಕರ್ಯ:

ವೈಮಾನಿಕ ತರಬೇತಿ ಶಾಲೆಯಲ್ಲಿ ಮೂಲಸೌಕರ್ಯಗಳ ಪಟ್ಟಿ ಈ ಕೆಳಕಂಡಂತೆ ಇರುತ್ತದೆ.

1. ವಿಮಾನಗಳು: 2 ಸೆಸ್ನಾ 152 ವಿಮಾನಗಳು, 2 ಸೆಸ್ನಾ 172 ವಿಮಾನಗಳು.
2. ಸಿಮುಲೇಟರ್ : Elite S812 Single Engine
3. ಎ.ಟಿ.ಸಿ
4. ವಿಮಾನ ನಿರ್ವಹಣಾ ವಿಭಾಗ (ಯಂತ್ರೋಪರಕರಣಗಳ ಸಾಧನಗಳೊಂದಿಗೆ)
5. ತರಬೇತಿ ಶಾಲೆಗಾಗಿ ಹ್ಯಾಂಗರ್ ಕಂ ದಾಸ್ತಾನು ಕೊಠಡಿ
6. ಆಡಳಿತ ಕಟ್ಟಡ.
7. ಒಂದು ನಿರ್ದೇಶಕರ ಕೊಠಡಿ/ ಸಭಾಂಗಣ
8. ನಿರ್ದೇಶಕರ ಕಛೇರಿ ಸಿಸಿಟಿವಿ ಮಾನಿಟರಿಂಗ್ ಸಿಸ್ಟಂ ಒಳಗೊಂಡು
9. ಒಂದು ತರಗತಿ ಕೊಠಡಿ ಪ್ರೊಜೆಕ್ಷನ್ ಮತ್ತು ಅಂತರ್ಜಾಲ ವ್ಯವಸ್ಥೆಯೊಂದಿಗೆ.
10. ವಿಮಾನ ಸಂಕ್ಷಿಪ್ತ ವಿವರಣೆ/ವಿಭಾಗ ಕೊಠಡಿ
11. ಗಾರ್ಡ್ ಕೊಠಡಿ
12. ಗ್ರಂಥಾಲಯ
13. ಪ್ರಥಮ ಚಿಕಿತ್ಸೆ ಕೊಠಡಿ
14. ಪ್ರಶಿಕ್ಷುಗಳಿಗೆ ವಿಶ್ರಾಂತಿ ಕೊಠಡಿ
15. ಅಗ್ನಿ ಶಾಮಕ ವಾಹನ
16. ಎರಡು ಲಘು ವಾಹನಗಳು

ಹೆಚ್ಚಿನ ವಿವರಗಳಿಗೆ ಸರ್ಕಾರಿ ವೈಮಾನಿಕ ತರಬೇತಿ ಶಾಲೆಯ ವ್ಯವಸ್ಥಾಪಕರನ್ನು ಸಂಪರ್ಕಿಸಿ

## ಒದಗಿಸುವ ಸೌಲಭ್ಯಗಳು:-

**ಶಾಲೆಯ ವತಿಯಿಂದ ಒದಗಿಸಲಾಗುವ ಸೌಲಭ್ಯಗಳು ಈ ಕೆಳಕಂಡಂತೆ ಇರುತ್ತವೆ:**

1. ಎ.ಎಂ.ಇ ವಿದ್ಯಾರ್ಥಿಗಳಿಗೆ ಓ.ಜೆ.ಟಿ ತರಬೇತಿಯನ್ನು 6 ತಿಂಗಳ ಅವಧಿಗೆ ರೂ 20,000+ಸೇವಾಶುಲ್ಕ ರ ದರದಲ್ಲಿ ನೀಡಲಾಗುತ್ತದೆ.
2. ಎ.ಎಂ.ಇ ವಿದ್ಯಾರ್ಥಿಗಳಿಗೆ ಅಪ್ರೆಂಟಿಸ್‌ಗಾಗಿ ಆರು ತಿಂಗಳ ಅವಧಿಗೆ ರೂ 15000+ಸೇವಾಶುಲ್ಕ ರ ದರದಲ್ಲಿ ನೀಡಲಾಗುತ್ತದೆ.
3. ಫ್ಲೈಟ್ ಸಿಮುಲೇಟರ್ ತರಬೇತಿ
4. ಜಕ್ಕೂರು ವಿಮಾನ ನಿಲ್ದಾಣಕ್ಕೆ ಬಂದುಹೋಗುವ ವಿಮಾನಗಳಿಗೆ ಲ್ಯಾಂಡಿಂಗ್ ಮತ್ತು ಪಾರ್ಕಿಂಗ್ ಸೌಲಭ್ಯವನ್ನು ನೀಡಲಾಗುತ್ತದೆ. (ಸರ್ಕಾರಿ ವೈಮಾನಿಕ ತರಬೇತಿ ಶಾಲೆಯು ಪ್ರಸಕ್ತ ನಿಗದಿ ಪಡಿಸಿರುವ ದರಗಳಂತೆ)

5. ಜಕ್ಕೂರು ವಿಮಾನ ನಿಲ್ದಾಣದಲ್ಲಿ ರಾತ್ರಿ ಹಾರಾಟ ಸೌಲಭ್ಯ ಇರುವುದಿಲ್ಲ.
6. ರನ್‌ವೇ ಉದ್ದವು 974 ಮೀಟರ್ (3195 ಅಡಿ) ಗಳಿದ್ದು, 5700 ಕೆ.ಜಿ. ತೂಕದ ವಿಮಾನಗಳಿಗೆ
7. ಲ್ಯಾಂಡಿಂಗ್ ಸಾಮರ್ಥ್ಯವನ್ನು ಹೊಂದಿರುತ್ತದೆ.

## ಜೀವನ ವೃತ್ತಿ (Careers)

ಶೀಘ್ರದಲ್ಲಿ ಈ ಕೆಳಕಂಡ ಹುದ್ದೆಗಳನ್ನು ಭರ್ತಿಮಾಡಲಾಗುತ್ತದೆ.

1. ಸೆಸ್ನಾ-172 ವಿಮಾನದಲ್ಲಿ ಕೆಲಸ ನಿರ್ವಹಿಸಿದ ಅನುಭವವುಳ್ಳ ಸಿನಿಯರ್ ಟೆಕ್ನಿಷಿಯನ್ -1 ಹುದ್ದೆ
   ಹೆಚ್ಚಿನ ವಿವರಗಳಿಗೆ ಸರ್ಕಾರಿ ವೈಮಾನಿಕ ತರಬೇತಿ ಶಾಲೆಯ ಆಡಳಿತ ವರ್ಗವನ್ನು ಸಂಪರ್ಕಿಸುವುದು

## ಅತೀ ಶೀಘ್ರದಲ್ಲಿ

ಈ ಕೆಳಕಂಡ ಸೌಲಭ್ಯಗಳನ್ನು ಪ್ರಸಕ್ತ ಮೂಲಸೌಕರ್ಯಗಳಲ್ಲಿ ಅತೀ ಶೀಘ್ರದಲ್ಲಿ ಸೇರಿಸಲಾಗುವುದು.

1. ಏರ್ ಅಂಬೂಲೆನ್ಸ್
2. ಸ್ಕೈ ಡೈವಿಂಗ್ – ಅಡ್ವೆಂಚರ್ ಸ್ಪೋರ್ಟ್ಸ್
3. ಮೈಕ್ರೋಲೈಟ್ ತರಬೇತಿ ಲೈಸೆನ್ಸ್
4. ಗಣ್ಯ ವ್ಯಕ್ತಿಗಳ ಚಲನವಲನ
5. ಪೈಲೆಟ್ ಲೈಸೆನ್ಸ್ ರಿನ್ಯುವಲ್ /ಸಿ.ಪಿ.ಎಲ್ ಲೈಸೆನ್ಸ್ ಹೊಂದಿದವರಿಗೆ (ಪ್ರಾರಂಭವಾಗಿದೆ).
6. ವೈಮಾನಿಕ ಅನುಭವ-ಜಾಯ್ ರೈಡ್(ಪ್ರಾರಂಭವಾಗಿದೆ).
   ಹೆಚ್ಚಿನ ವಿವರಗಳಿಗೆ ಸರ್ಕಾರಿ ವೈಮಾನಿಕ ತರಬೇತಿ ಶಾಲೆಯ ಆಡಳಿತ ವರ್ಗದವರನ್ನು ಸಂಪರ್ಕಿಸಿ

## ಸಂಪರ್ಕಿಸಿ Contact Us


ಸರ್ಕಾರಿ ವೈಮಾನಿಕ ತರಬೇತಿ ಶಾಲೆ,
ಜಕ್ಕೂರು ವಿಮಾನ ನಿಲ್ದಾಣ, ಯಲಹಂಕ ಅಂಚೆ,
ಬೆಂಗಳೂರು-560064.
ಕಛೇರಿ ದೂರವಾಣಿ ಸಂಖ್ಯೆ:: **+91 80 23332251**
ಮು.ವಿ.ಬೋ. ದೂರವಾಣಿ ಸಂಖ್ಯೆ::**+91 9986656788**
**ಸಹಾಯಕ ವಿಮಾನ ಬೋಧಕರು ಮೊಬೈಲ್ : +91 8637328480/ 9990 101974**
ಇ-ಮೇಲ್ ವಿಳಾಸ : gfts.kar@gmail.com


ನಿರ್ದೇಶಕರು
ಸರ್ಕಾರಿ ವೈಮಾನಿಕ ತರಬೇತಿ ಶಾಲೆ
ಜಕ್ಕೂರು, ಬೆಂಗಳೂರು